## ಇಲ್ಲಿಯವರೆಗೆ...



ಹರಿಲಾಲ ಆರ್ಥಿಕ ಸ್ವಾವಲಂಬಿಯಾಗಬೇಕು ಎಂಬ ಮಹತ್ತರ ಉದ್ದೇಶದಿಂದ ಬಾಪೂ ಆತನಿಗೆ ಆಸ್ತಿಯಲ್ಲಿ ಏನೂ ಕೇಳಬಾರದು ಎನ್ನುತ್ತಾರೆ. ಇದರಿಂದ ವ್ಯಗ್ರಗೊಂಡ ಹರಿಲಾಲ ಬಾಪೂಗೆ ಒಂದು ಪತ್ರವನ್ನು ಬರೆಯುತ್ತಾನೆ. ಹರಿಲಾಲನ ಪರಿಸ್ಥಿತಿ ಕಠೋರವಾಗುತ್ತದೆ. ಹೆಂಡತಿ ಮತ್ತು ಮಕ್ಕಳ ಚಿಂತೆ ಆತನನ್ನು ಕಾಡುತ್ತದೆ. ಮುಂಬೈಗೆ ಹೋಗಿ ಉದ್ಯಮಿ ನರೋತ್ತಮದಾಸನನ್ನು ಭೇಟಿಯಾಗುತ್ತಾನೆ. ಜೀವನ ನಿರ್ವಹಣೆಗೆ ಒಂದು ಕೆಲಸ ಬೇಕಾಗಿದೆ ಎನ್ನುತ್ತಾನೆ. ಆಗ ಸೋಲಾಪುರದಲ್ಲಿರುವ ತನ್ನ ಮಿಲ್‌ನಲ್ಲಿ ಮಿಲ್‌ನ ಇನ್‌ಚಾರ್ಜ್ ಆಗಿ ಕೆಲಸ ಕೊಡಿಸುತ್ತಾನೆ ನರೋತ್ತಮದಾಸ. ಅಲ್ಲಿ ಕೆಲಸಕ್ಕೆ ಸೇರಿ ಕೆಲದಿನಗಳಷ್ಟೇ ಆಗಿತ್ತು. ನರೋತ್ತಮದಾಸರು ಪತ್ರಬರೆದು ಹರಿಲಾಲ ಕಲ್ಕತ್ತಾದ ಕಚೇರಿಯಲ್ಲಿ ಕೆಲಸ ಮಾಡಬೇಕು ಎಂದು ಹೇಳುತ್ತಾರೆ. ಈ ಮಧ್ಯೆ ತಾನು ಕಲ್ಕತ್ತಾದಲ್ಲಿ ಕೆಲಸಕ್ಕೆ ಸೇರಿದ್ದು ಎಲ್ಲವೂ ಒಂದು ಹಂತಕ್ಕೆ ಬಂದ ಮೇಲೆ ಹೆಂಡತಿ ಮಕ್ಕಳನ್ನು ಕೋಚರಬ್ ಆಶ್ರಮದಿಂದ ಕರೆತರುವುದಾಗಿ ಬಾಪೂಗೆ ಪತ್ರ ಬರೆಯುತ್ತಾನೆ. ಕಲ್ಕತ್ತಾದಲ್ಲಿ ವಾಸಕ್ಕೆ ಒಳ್ಳೆಯ ಮನೆಯೂ ಸಿಗುತ್ತದೆ. ಗುಲಾಬ, ಮಕ್ಕಳನ್ನೂ ಕಲ್ಕತ್ತಾಕ್ಕೆ ಕರೆಸಿಕೊಳ್ಳುತ್ತಾನೆ.

ಈ ಮಧ್ಯೆ ಮಣಿಲಾಲ ಸ್ವಲ್ಪ ಹಣವನ್ನು ಹರಿಲಾಲನಿಗೆ ನೀಡಿದ ವಿಚಾರ ಬಾಪೂಗೆ ತಿಳಿಯುತ್ತದೆ. ಮಣಿಲಾಲನ ಬಳಿ ಹಣ ಹೇಗೆ ಬಂತು ಎಂದು ಮಣಿಲಾಲನನ್ನೇ ವಿಚಾರಿಸುತ್ತಾರೆ ಬಾಪೂ. 'ನೀನು ಆಶ್ರಮದ ಹಣವನ್ನೇ ತೆಗೆದುಕೊಂಡಿದ್ದು ಅದು ಅಪರಾಧ. ಇದಕ್ಕೆ ಪ್ರಾಯಶ್ಚಿತ್ತವಾಗಿ ನಾನೇ ನೀರಿನಲ್ಲಿ ಮುಳುಗು ಹಾಕುತ್ತೇನೆ ಎಂದು ಬಾಪೂ ಹೇಳಿದಾಗ ಮಣಿಲಾಲನಿಗೆ ಬಹಳ ಬೇಸರವಾಗುತ್ತದೆ. ಅಲ್ಲದೆ ಬಾಪೂ ಆತ್ಮಶುದ್ಧಿಗಾಗಿ ಉಪವಾಸದ ಹೊರೆ ಹೋಗಿರುವ ವಿಚಾರವನ್ನು ಹರಿಲಾಲನಿಗೂ ತಿಳಿಸುತ್ತಾನೆ. ಇದರಿಂದ ಹರಿಲಾಲನ ಮನಸ್ಸಿಗೂ ಬೇಸರವಾಗುತ್ತದೆ. ಕೆಲಸದಲ್ಲಿ ತೊಡಗಿಸಿಕೊಳ್ಳಲು ಕಷ್ಟವಾಗುತ್ತದೆ. ಇದನ್ನು ಗಮನಿಸಿದ ಜೊತೆಗಾರನೊಬ್ಬ, ಸಂಜೆ ಎರಡು ಗುಟುಕು ಕುಡಿದರೆ ಮನಸ್ಸು ಸರಿಯಾಗುತ್ತದೆ ಎಂಬ ಸಲಹೆ ಕೊಡುವುದಲ್ಲದೆ ಸಂಜೆ ಮದ್ಯದ ರುಚಿಯನ್ನೂ ಹರಿಲಾಲನಿಗೆ ತೋರಿಸುತ್ತಾನೆ. ರಾತ್ರಿ ಮನೆಗೆ ಬಂದಾಗ ಗುಲಾಬಳಿಗೆ ಸೆರೆಯ ದುರ್ಗಂಧ ಮೂಗಿಗೆ ಅಡರುತ್ತದೆ. ಇದು ಹಣದ ಮುಗ್ಗಟ್ಟಿಗಾಗಿಯೇ ಹೀಗೆ ಮಾಡಿರುವುದು ಎಂದು ಗೊತ್ತಾಗಿ ತನ್ನ ತವರುಮನೆಯಿಂದ ಸ್ವಲ್ಪ ದುಡ್ಡು ತಂದು ಕೊಡುವುದಾಗಿ ಹೇಳುತ್ತಾಳೆ. ಆಗ ಹರಿಲಾಲ ಗುಲಾಬ ನಿನ್ನ ಮೈತುಂಬ ಬಂಗಾರ ಸದ್ಯದಲ್ಲೇ ಹಾಕುತ್ತೇನೆ ಎಂದು ಹೇಳುತ್ತಾನೆ.

ಹೋದರೆ, ಬದಲಾಗುವ ವಾತಾವರಣದಿಂದ ನಿನ್ನ ಆರೋಗ್ಯವೂ ಸುಧಾರಿಸುವುದು, ಇಲ್ಲಿ ನಾನು ಸ್ವಲ್ಪ ಹಣವನ್ನೂ ಉಳಿತಾಯ ಮಾಡಬಹುದು.'

'ಸ್ವಾಮಿ, ನಿಮ್ಮ ಸುಖವೇ ನನ್ನ ಸುಖ. ತಾಯಿ ಅಂಬೆ ನಿಮಗೆ ಸದಾ ಸಹಾಯವನ್ನು ಮಾಡಲಿ.' ಗುಲಾಬ ಪತಿವ್ರತಾ ನಾರಿಯಂತೆ ತನ್ನ ಒಪ್ಪಿಗೆಯನ್ನು ಸೂಚಿಸಿದಳು.

### ಇಪ್ಪತ್ತಮೂರು

ಹೆಂಡತಿಮಕ್ಕಳನ್ನು ರಾಜಕೋಟಕ್ಕೆ ಕಳುಹಿಸಿದ ನಂತರ ಈಗ ಹರಿಲಾಲ ಒಂಟಿಯಾದ. ಅವನ ಮನಸ್ಸು ಸಹ ಕಚೇರಿಯ ಕೆಲಸ ಕಾರ್ಯಗಳಿಂದ ಬೇಸರಗೊಂಡಿತ್ತು. ವ್ಯಾಪಾರವನ್ನು ಮಾಡುವ ಆಸೆ ಕಮರುವುದಕ್ಕೆ ಪ್ರತಿಯಾಗಿ ಮತ್ತೆ ತಲೆಯೆತ್ತುತ್ತಿತ್ತು. ಯುದ್ಧದಿಂದಾಗಿ ಬಜಾರಿನಲ್ಲಿ ಈಗಲೂ ಸಹ ತಳಮಳವಿತ್ತು. ಇಂಥ ಪರಿಸ್ಥಿತಿಯಲ್ಲಿ ಜನ ಸಾಕಷ್ಟು ಲಾಭವನ್ನು ಗಳಿಸುತ್ತಿದ್ದರು. ಆದರೂ ಹರಿಲಾಲನಿಗೆ ಅವನ ಅದೃಷ್ಟ ಸಹಕರಿಸುತ್ತಿರಲಿಲ್ಲ. ತಾನು ಹಾಕಿದ ಹಣವನ್ನು ಹೇಗಾದರೂ ಮರಳಿ ಪಡೆಯಬೇಕೆಂದು ಅವನು ಚಡಪಡಿಸುತ್ತಿದ್ದ. ಹೀಗಾಗಿ ತನ್ನ ಅದೃಷ್ಟವನ್ನು ಪರೀಕ್ಷಿಸಲೋಸುಗ ಬೇರೆಬೇರೆ ಸ್ಥಳಗಳಲ್ಲಿ ಹಣವನ್ನು ಪಣಕ್ಕೊಡ್ಡಿದ್ದ. ಅದಕ್ಕಾಗಿ ಕಠಿಣ ಶ್ರಮವನ್ನೂ ಆರಂಭಿಸಿದ್ದ. ಇದೆಲ್ಲದರಿಂದಾಗಿ ಕಚೇರಿಯಲ್ಲಿ ಅವನ ಸಂಬಂಧ ಬಿಗಡಾಯಿಸುತ್ತಿತ್ತು.

ಮನೆಯಲ್ಲಿ ಗುಲಾಬ ಮತ್ತು ಮಕ್ಕಳಿದ್ದಾಗ ಹರಿಲಾಲನಿಗೆ ನಿಯಂತ್ರಣವಿತ್ತು. ಮನೆಗೆ ತಡವಾಗಿ ಬಂದಾಗ, ತಾನು ತಪ್ಪೆಸಗುತ್ತಿದ್ದೇನೆ ಎಂಬ ಸಂಕೋಚವನ್ನಂತೂ ಮನಗಾಣುತ್ತಿದ್ದ. ಗುಲಾಬ ಮಾತನಾಡದಿದ್ದಾಗ್ಯೂ, ಅವಳ ಕಣ್ಣುಗಳಲ್ಲಿ ಮೂಡುತ್ತಿದ್ದ ಭಾವನೆಗಳು ಹರಲಾಲನನ್ನು ಎಚ್ಚರಿಸುತ್ತಿದ್ದವು. ಅವನಿಗೆ ಅವಳ ಮನಃಸ್ಥಿತಿಯ ಅರಿವಾಗುತ್ತಿತ್ತು. ಆದರೆ ಈಗ ಆ ಸಂಕೋಚವೂ ಮಣ್ಣುಪಾಲಾಗಿತ್ತು. ಮಕ್ಕಳೊಂದಿಗೆ ಕಳೆಯುತ್ತಿದ್ದ ಅಲ್ಪಸ್ವಲ್ಪ ಸಮಯದಿಂದಾಗಿ ಮನಸ್ಸು ಹಗುರಗೊಳ್ಳುತ್ತಿತ್ತು. ಈಗ ಆ ಸಾಮೀಪ್ಯವೂ ಇರಲಿಲ್ಲ. ಪ್ರಸ್ತುತ ಹರಿಲಾಲನ ದಿನಗಳು ಹದಗೆಟ್ಟ ಮನಃಸ್ಥಿತಿಯಲ್ಲಿ ಸಾಗುತ್ತಿದ್ದವು. ಈ ಮಾನಸಿಕ ಪರಿಸ್ಥಿತಿಯಿಂದ ಪಾರಾಗಲು ಅವನ ಬಳಿ ಸುಲಭದ ಸಾಧನವೊಂದಿತ್ತು; ಅದೇ ಸಾರಾಯಿ! ಹರಿಲಾಲ ಇದಕ್ಕೆ ಹೆಚ್ಚು ಅಂಟಿಕೊಂಡ. ಅವನು ಸಾರಾಯಿಯನ್ನು ಸೇವಿಸಿದಾಗ, ಅವನ ಹೆಜ್ಜೆಗಳು ತಮ್ಮಷ್ಟಕ್ಕೆ ತಾವೇ ಸೋನಾಗಾಛಿಯ ಕಡೆಗೆ ಹೋಗುವುದು ಸ್ವಾಭಾವಿಕವಾಯಿತು.

ಆದರೆ ಈಗ ಹಣದ ಕೊರತೆ ತುಂಬಾ ಕಾಡುತ್ತಿತ್ತು. ಹೆಂಡತಿಮಕ್ಕಳನ್ನು ರಾಜಕೋಟಕ್ಕೆ ಕಳುಹಿಸಿದ ನಂತರ ಮನೆಯ ಖರ್ಚು ಉಳಿಯುವುದು, ತಾನು ತನ್ನ ವೇತನದಲ್ಲಿ ಸ್ವಲ್ಪ ಹಣವನ್ನು ಉಳಿಸಲು ಸಾಧ್ಯವಾಗುವುದು ಎಂಬ ಅವನ ಅಭಿಪ್ರಾಯ ತಲೆಕೆಳಗಾಗಿತ್ತು. ಇದಕ್ಕೆ ವಿರುದ್ಧವಾಗಿ ಅವನ ಖರ್ಚು ಹೆಚ್ಚುತ್ತಿತ್ತು. ಅದರೊಂದಿಗೆ ಇನ್ನೆರಡು ವಿಧದ ವ್ಯಾಪಾರವನ್ನು ಮಾಡುವ ಅವಕಾಶಗಳು ಅವನನ್ನು ಆಕರ್ಷಿಸುತ್ತಿದ್ದವು. ಗುಲಾಬಳ ಆರೈಕೆಗಾಗಿ ಖರ್ಚಾಗಿದ್ದ ಹಣಕ್ಕೂ ಅವನು ಸಾಲಗಾರನಾಗಿದ್ದ. ಸಾಲ ಕೊಟ್ಟವರ ತಗಾದೆಯಿಂದ ಅವನು ತೀವ್ರ ಸ್ವರೂಪದಲ್ಲಿ ಅಧೈರ್ಯಗೊಂಡಿದ್ದ.

ಹೀಗೆ ನಾಲ್ಕೂ ಕಡೆಗಳಿಂದ ಪೂರ್ಣವಾಗಿ ಸುತ್ತುವರೆದ ನಂತರ ಹರಿಲಾಲ ಮತ್ತೊಮ್ಮೆ, ಮತ್ತೊಂದು ಪಣಕ್ಕೆ ಕೈಹಾಕಿ ತನ್ನ ಅದೃಷ್ಟವನ್ನು ಪರೀಕ್ಷಿಸಲು ತೀರ್ಮಾನಿಸಿದ. ಈಗಾಗಲೇ ತಲೆಯ ಮೇಲೆ ಹದಿನೈದು ಸಾವಿರ ರೂಪಾಯಿಗಳ ಸಾಲವಿತ್ತು. ಯಾವುದೇ ಪರಿಸ್ಥಿತಿಯಲ್ಲೂ ಅಷ್ಟು ಹಣವನ್ನು ವೇತನದಿಂದ ತೀರಿಸಲು ಸಾಧ್ಯವಿರಲಿಲ್ಲ. ಅಲ್ಲದೆ ಈಗಲೂ ರಾಜಕೋಟದಲ್ಲಿ ಗುಲಾಬಳ ಆರೋಗ್ಯದಲ್ಲಿ ಸುಧಾರಣೆಯಾಗಿರಲಿಲ್ಲ. ಮಕ್ಕಳ ಖರ್ಚಿಗೆ ಹಣವನ್ನು ಕಳುಹಿಸಲು ಅಸಮರ್ಥನಾಗಿದ್ದ. ಈ ದುಃಖ ಸಹ ಹರಿಲಾಲನನ್ನು ತಿವಿಯುತ್ತಿತ್ತು. ಅದೇ ವೇಳೆಗೆ ದಲ್ಲಾಳಿಯೊಬ್ಬ ಹರಿಲಾಲನಿಗೆ ಮತ್ತೊಂದು ಲಾಭದಾಯಕ ವ್ಯಾಪಾರದ ಬಗ್ಗೆ ಆಸೆಯನ್ನು ತೋರಿಸಿದ. ಇದರಿಂದ ಹರಿಲಾಲ ದುರಾಸೆಗೆ ಸಿಲುಕಿದ. ಹಣದ ಗಂಟೇ ಬೇಕಿತ್ತು, ಆದರೆ ಈ ಹಣ ಅತಿ ಕಡಿಮೆ ಅವಧಿಯಲ್ಲಿ ದುಪ್ಪಟ್ಟು ಆಗುವ ಪೂರ್ಣ ಸಾಧ್ಯತೆಯಿತ್ತು. ಹರಿಲಾಲ ಈ ಮೊದಲೇ ಸಾಲದಲ್ಲಿ ಮುಳುಗಿದ್ದ. ತಾನು ಹೇಗಾದರೂ ಮಾಡಿ ಈ ವ್ಯಾಪಾರವನ್ನು ಕೈಗೆತ್ತಿಕೊಳ್ಳಬೇಕಿತ್ತು. ಈ ವ್ಯಾಪಾರವೇ ಅವನನ್ನು ಕಷ್ಟದಿಂದ ಪಾರು ಮಾಡುವುದಿತ್ತು.

ಹರಿಲಾಲ ಕಲ್ಕತ್ತಾಗೆ ಬಂದಾಗ ಸೇಠ್ ನರೋತ್ತಮದಾಸರ ನಂಬಿಕಸ್ಥ ಮನುಷ್ಯನಾಗಿ ಬಂದಿದ್ದ. ಅದೆಷ್ಟೋ ಬಾರಿ ನಗದು ವ್ಯವಹಾರದ ಲೆಕ್ಕಪತ್ರ ಅವನ ಕೈಯಲ್ಲಿರುತ್ತಿತ್ತು. ಹರಿಲಾಲನ ವ್ಯವಹಾರ ಮತ್ತು ಲೆಕ್ಕಪತ್ರ ಈ ಮೊದಲಿನಂತಿರಲಿಲ್ಲ, ಸೇಠ್ ನರೋತ್ತಮದಾಸರು ಸಹ ಅದಕ್ಕಾಗಿ ಯಾವುದೇ ಬೇರೆ ವ್ಯವಸ್ಥೆಯನ್ನು ಸಹ ಮಾಡಿರಲಿಲ್ಲ. ಆದರೆ ಹರಿಲಾಲ ಮಾತ್ರ ಲೆಕ್ಕಪತ್ರದಲ್ಲಿ ಎಂದೂ ಯಾವುದೇ ಗೋಲ್‌ಮಾಲ್ ಮಾಡದೆ, ಒಂದೊಂದು ಬಿಡಿಗಾಸಿನ ಲೆಕ್ಕವನ್ನೂ ಸರಿಯಾಗಿ ಬರೆದಿಡುತ್ತಿದ್ದ.

ಆಗಲೇ ಮದ್ರಾಸಿನ ವ್ಯಾಪಾರಿಯೊಬ್ಬ ಸೇಠ್ ನರೋತ್ತಮದಾಸರಿಗೆ ಕೊಡಬೇಕಾದ ಮೂವತ್ತುಸಾವಿರ ನಗದು ಹಣವನ್ನು